OS 128 of 2017

ಸಾಕ್ಷಿಯನ್ನು ದಿ:18.07.2023 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ ಃ-**

1. ದಾವಾ ಆಸ್ತಿಯ ಮೂಲತಃ ಧೂಮೇಗೌಡನಿಗೆ ಸೇರಿದ್ದು. ಧೂಮೇಗೌಡನಿಗೆ ನಾಲ್ಕು ಜನ ಮಕ್ಕಳು ಅವರೆಂದರೆ ಹೊನ್ನಮ್ಮ, ಕೆಂಪೇಗೌಡ, ಪುಟ್ಟಸ್ವಾಮಿ ಮತ್ತು ನಾಗರಾಜು ಎಂದರೆ ಸರಿ. ಸದರಿ ನಾಲ್ಕು ಜನರು ಪಿತ್ರಾರ್ಜಿತ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಅನುಭೋಗ ಮಾಡುತ್ತಿದ್ದಾರೆಂದರೆ ಸರಿ. ನಾನು ಮತ್ತು ಉಳಿದ ವಾದಿಯರು ಮದುವೆಯಾಗಿ ನಮ್ಮ ಗಂಡಂದಿರ ಮನೆಯಲ್ಲಿರುತ್ತೇವೆಂದರೆ ಸರಿ. ಮದುವೆಯಾದ ನಂತರ ನಮ್ಮ ಎಲ್ಲಾ ದಾಖಲಾತಿಗಳು ನಮ್ಮ ಗಂಡನ ಮನೆಯ ವಿಳಾಸದಲ್ಲಿದ್ದು ನಾವು ಅಲ್ಲೇ ವಾಸವಾಗಿರುತ್ತೇವೆ. ದಾವಾ ಆಸ್ತಿಯ ಮುಂಭಾಗ ಒಂದನೇ ಪ್ರತಿವಾದಿ ಮತ್ತು ಹಿಂಭಾಗ ನನ್ನ ತಂದೆ ವಾಸವಾಗಿದ್ದರು ಎಂದರೆ ಸರಿಯಲ್ಲ. ಒಂದನೇ ಪ್ರತಿವಾದಿ ಒಂದೂವರೆಯಿಂದ ಎರಡು ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಒಂದನೇ ಪ್ರತಿವಾದಿ ದಾವಾ ಸ್ವತ್ತಿನ ಮನೆಯಲ್ಲಿಯೇ ಮರಣ ಹೊಂದಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬೆಂಗಳೂರಿನಲ್ಲಿ ಮರಣ ಹೊಂದಿದ್ದು ಶವವನ್ನು ದಾವಾ ಸ್ವತ್ತಿನ ಮನೆಗೆ ತೆಗೆದುಕೊಂಡು ಬಂದಿರುತ್ತಾರೆ. ಒಂದನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ ವಾಸವಿದ್ದ ಕಾರಣ ಒಂದನೇ ಪ್ರತಿವಾದಿ ಶವವನ್ನು ಗ್ರಾಮಸ್ಥರು ನೋಡಿಕೊಂಡು ಹೋಗಲು ದಾವಾ ಆಸ್ತಿಯಲ್ಲಿ ಶವವನ್ನು ಇಟ್ಟಿದ್ದರು ಎಂದರೆ ಸರಿ. ಒಂದನೇ ಪ್ರತಿವಾದಿ ಮರಣ ಹೊಂದಿದ ನಂತರ ದಾವಾ ಆಸ್ತಿಯ ಮುಂದಿನ ಅರ್ಧ ಭಾಗದ ಸ್ವತ್ತನ್ನು ಪ್ರತಿವಾದಿಯ ಮಕ್ಕಳು ಬೆಂಗಳೂರಿನಲ್ಲಿ ವಾಸಮಾಡುವ ಕಾರಣ ಬೀಗ ಹಾಕಿಕೊಂಡು ಹೋಗಿರುತ್ತಾರೆಂದರೆ ಸರಿ. ಒಂದನೇ ಪ್ರತಿವಾದಿಯ ಮಕ್ಕಳು ದಾವಾ ಸ್ವತ್ತಿಗೆ ಬೀಗ ಹಾಕಿಕೊಂಡು ಹೋದ ಕಾರಣ ಮಳೆಗಾಳಿಗೆ ಸದರಿ ಮನೆಯು ಶಿಥಿಲಾವಸ್ಥೆಯಿಂದ ಕೂಡಿರುತ್ತದೆಂದರೆ ಸರಿ. ದಾವಾ ಸ್ವತ್ತಿನ ಹಿಂಭಾಗದ ಎಷ್ಟು ಅಡಿ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿದ್ದೇವೆಂದು ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಒಂದನೇ ಪ್ರತಿವಾದಿ ಎಷ್ಟು ಅಡಿ ವಿಸ್ತೀರ್ಣದಲ್ಲಿ ವಾಸವಿದ್ದ ಹಾಗೂ ನಾವು ಎಷ್ಟು ಅಡಿ ವಿಸ್ತೀರ್ಣದಲ್ಲಿ ವಾಸವಾಗಿದ್ದೇವೆಂದು ಹೇಳಲು ಬರುವುದಿಲ್ಲ. ದಾವಾ ಸ್ವತ್ತಿನ ವಿಸ್ತೀರ್ಣ ಹೇಳಲು ಬರುವುದಿಲ್ಲ. ದಾವಾ ಸ್ವತ್ತಿನ ಖಾತೆ ನನ್ನ ತಂದೆಯ ಹೆಸರಿನಲ್ಲಿರುತ್ತದೆ. ದಾವಾ ಸ್ವತ್ತಿನ

ಖಾತೆ ಯಾವಾಗ ನನ್ನ ತಂದೆ ಹೆಸರಿಗೆ ಬಂದಿರುತ್ತದೆಂದು ಗೊತ್ತಿಲ್ಲ. ದಾವಾ ಸ್ವತ್ತಿನ ಖಾತೆ ಇದುವರೆಗೂ ನನ್ನ ತಂದೆ ಹೆಸರಿಗೆ ಇರುತ್ತದೆ, ಸದರಿ ದಾಖಲಾತಿ ಹಾಜರು ಪಡಿಸಿಲ್ಲ. ನನ್ನ ತಂದೆ ಹೆಸರಿಗೆ ಯಾವುದೇ ದಾವಾ ಸ್ವತ್ತಿನ ದಾಖಲಾತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ವಿದ್ಯುತ್ ಸೌಲಭ್ಯವನ್ನು ಒಂದನೇ ಪ್ರತಿವಾದಿ ಹೆಸರಿಗೆ ಕೊಡಲಾಗಿದೆ ಎಂದರೆ ಸರಿ. ದಾವಾ ಸ್ವತ್ತಿನ ವಿದ್ಯುತ್ ಬಿಲ್ಲು ಒಂದನೇ ಪ್ರತಿವಾದಿ ಹೆಸರಿನಲ್ಲಿ ಬರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ತೆರಿಗೆ ಒಂದನೇ ಪ್ರತಿವಾದಿ ಹೆಸರಿಗೆ ಕಟ್ಟಲಾಗುತ್ತಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನಾವು ಅನುಭವದಲ್ಲಿದ್ದೇವೆಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ. ನಾವುಗಳು ಈ ದಾವೆಯನ್ನು ದಾವಾ ಸ್ವತ್ತು ನಮ್ಮ ಭಾಗಕ್ಕೆ ಬರಬೇಕೆಂದು ಸಲ್ಲಿಸಿರುತ್ತೇವೆ. ನಾವು ದಾವಾ ಸ್ವತ್ತಿನ ಮಾಲೀಕರೆಂದು ತೀರ್ಮಾನಿಸಿ ಎಂದು ದಾವೆಯನ್ನು ಸಲ್ಲಿಸಿಲ್ಲ. 2017 ರಲ್ಲಿ ಪ್ರತಿವಾದಿಯರು ನಮ್ಮ ಜೊತೆ ಜಗಳ ತೆಗೆದಿರುತ್ತಾರೆ. ಪ್ರತಿವಾದಿಗಳು ಮನೆ ನಮ್ಮ ಭಾಗಕ್ಕೆ ಬಂದಿರುತ್ತದೆ ಎಂದು ನಮ್ಮ ಜೊತೆ ಗಲಾಟೆ ಮಾಡಿರುತ್ತಾರೆ. ನಾನು ಪೋಲೀಸರಿಗೆ ದೂರು ಕೊಟ್ಟ ಬಗ್ಗೆ ದಾಖಲಾತಿ ಹಾಜರುಪಡಿಸಿರುತ್ತೇನೆ. ಒಂದನೇ ಪ್ರತಿವಾದಿ ನನ್ನ ತಂದೆಗೆ ಬದುಕಿದ್ದಾಗಲೇ ವಿಭಾಗ ಮಾಡಿ ಆಸ್ತಿಗಳನ್ನು ಕೊಟ್ಟಿರುತ್ತಾರೆಂದರೆ ಗೊತ್ತಿಲ್ಲ. ನನ್ನ ಮತ್ತು ಉಳಿದ ವಾದಿಯರ ಮದುವೆಗೆ ಒಂದನೇ ಪ್ರತಿವಾದಿಯೇ ಖರ್ಚುವೆಚ್ಚ ಮಾಡಿ ಮದುವೆ ಮಾಡಿಕೊಟ್ಟಿರುತ್ತಾರೆಂದರೆ ಸರಿ. ಒಂದನೇ ಪ್ರತಿವಾದಿ ಮತ್ತು ವಾರಸುದಾರರು ಸ್ವಾಧೀನದಲ್ಲಿರುವ ಸ್ವತ್ತು ನಮಗೆ ಸೇರಬೇಕೆಂದು ಈ ದಾವೆ ಸಲ್ಲಿಸಿರುತ್ತೇವೆಂದರೆ ಸರಿ. ದಾವಾ ಸ್ವತ್ತಿನ ದಾಖಲಾತಿಗಳು ನನ್ನ ತಂದೆ ಹೆಸರಿಗೆ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಒಂದನೇ ಪ್ರತಿವಾದಿಯ ಮಕ್ಕಳು ಬೆಂಗಳೂರಿನಲ್ಲಿ ವಾಸಮಾಡುವ ಕಾರಣ ದಾವಾ ಆಸ್ತಿಯನ್ನು ಲಪಟಾಯಿಸಲು ಸುಳ್ಳು ದಾವೆ ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ನಾವು ಸುಳ್ಳು ಮಾಹಿತಿ ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

**1 ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ**
**ಮಳವಳ್ಳಿ.**